**ಇಂದು ದಿಃ05.04.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**<u>ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ.ಆರ್.ಬಿ.ಜೆ ವಕೀಲರಿಂದಃ</u>**

ಮೃತ ಸ್ವಾಮಿನಾಯಕ ನನ್ನ ಮಗ. ಅಪಘಾತವನ್ನು ನೋಡಿಲ್ಲ. ಅಪಘಾತದ ಬಗ್ಗೆ ಪೊಲೀಸರು ನನಗೆ ಮಾಹಿತಿ ಹೇಳಿದ್ದಾರೆ. ಅಪಘಾತದ ಬಗ್ಗೆ ನಾನೇ ದೂರು ಕೊಟ್ಟಿದ್ದೇನೆ. ಅಪಘಾತದ ಹಿನ್ನೆಲೆಯನ್ನು ಪೊಲೀಸರು ಬರೆದುಕೊಂಡಿಲ್ಲ ನಾನೇ ಬರೆದುಕೊಟ್ಟಿದ್ದೇನೆ. ಅಪಘಾತಪಡಿಸಿದ ವಾಹನದ ಸಂಖ್ಯೆಯನ್ನು ಪೊಲೀಸರು ಹೇಳಿದ್ದಾರೆ. 2 ನೇ ಎದುರುದಾರರ ವಾಹನ ನನ್ನ ಮಗನಿಗೆ ಅಪಘಾತಪಡಿಸದಿದ್ದರೂ ಪೊಲೀಸರ ಮಾತು ಕೇಳಿ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ರಾತ್ರಿ ಸುಮಾರು 11 ಗಂಟೆ ವೇಳೆಗೆ ಅಪಘಾತವಾಗಿರುವುದಾಗಿ ಮರುದಿನ ಬೆಳಿಗ್ಗೆ ನನಗೆ ತಿಳಿಸಿದ್ದಾರೆ. ನನ್ನ ಮಗನ ಹತ್ತಿರ ಮೊಬೈಲ್ ಇತ್ತು ಅದರಲ್ಲಿ ನಂಬರ್ ತೆಗೆದುಕೊಂಡು ನನಗೆ ಫೋನ್ ಮಾಡಿ ತಿಳಿಸಿದ್ದಾರೆ. ನನ್ನ ಮಗ ನಡೆದುಕೊಂಡು ಹೋಗುತ್ತಿದ್ದಾಗ ಅಪಘಾತವಾಗಿರುವುದಾಗಿ ಪೊಲೀಸರು ಹೇಳಿದ್ದಾರೆ. ಅಪಘಾತ ಯಾವ ರೀತಿ ಆಯಿತು ಎಂದು ಪೊಲೀಸರು ನನಗೆ ವಿವರಣೆ ಮಾಡಿ ಹೇಳಿಲ್ಲ. ಅಪಘಾತಪಡಿಸಿದ ವಾಹನವನ್ನು ನಾನು ನೋಡಿಲ್ಲ. ಯಾರು ಇಲ್ಲದ ವೇಳೆಯಲ್ಲಿ ಅಪಘಾತವಾಗಿದೆ ಎಂದರೆ ಸರಿ. ಅಪಘಾತವನ್ನು ಯಾರು ನೋಡಿಲ್ಲ ಎಂದರೆ ನನಗೆ ಗೊತ್ತಿಲ್ಲ ಪೊಲೀಸರು ಹೇಳಿದ್ದಾರೆ. ಸ್ಥಳ ಮಹಜರ್ ನಲ್ಲಿ ಅಪಘಾತಪಡಿಸಿದ ವಾಹನದ ಬಗ್ಗೆ ಕುರುಹು ಇಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ 2 ನೇ ಎದುರುದಾರರ ವಾಹನಕ್ಕೆ ಯಾವುದೇ ಜಕ್ಕಂ ಆಗಿಲ್ಲ ಎಂದರೆ ನನಗೆ

ಗೊತ್ತಿಲ್ಲ.ಹುಣಸೂರು ಹೆಚ್ ಡಿ ಕೋಟೆ ಮುಖ್ಯ ರಸ್ತೆಯಲ್ಲಿ ಅಪಘಾತವಾಯಿತು ಎಂದರೆ ಸರಿ. ರಸ್ತೆಯ ಎರಡೂ ಕಡೆ ಫುಟ್ ಪಾತ್ ಇದೆ ಎಂದರೆ ನಾನು ನೋಡಿಲ್ಲ. ದಾಖಲೆಗಳ ಪ್ರಕಾರ ಮಧ್ಯ ಭಾಗದಲ್ಲಿ ಅಪಘಾತವಾಗಿದೆ ಎಂದರೆ ಸರಿ. ನನ್ನ ಮಗನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ಮಗ ಮಧ್ಯಪಾನ ಮಾಡಿ ಯಾವುದೋ ವಾಹನಕ್ಕೆ ಸಿಕ್ಕಿ ಹಾಕಿಕೊಂಡು ಸತ್ತಿದ್ದಾನೆ ಪರಿಹಾರ ಪಡೆಯಲು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಗಾರೆ ಕೆಲಸ ಮಾಡುತ್ತಿದ್ದ. ನನ್ನ ಮಗನ ಆದಾಯದ ಬಗ್ಗೆ ದಾಖಲೆ ಕೊಟ್ಟಿಲ್ಲ. ನನ್ನ ಮಗನ ಆಧಾರ್ ಕಾರ್ಡ್ ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನ್ನ ಮಗನಿಗೆ ಅಪಘಾತದ ಕಾಲಕ್ಕೆ 50 ವರ್ಷಕ್ಕಿಂತ ಜಾಸ್ತಿಯಾಗಿತ್ತು ಎಂದರೆ ಸರಿಯಲ್ಲ 42 ವರ್ಷ ಆಗಿತ್ತು. ನನ್ನ ಮಗನ ವಯಸ್ಸು ಮರೆ ಮಾಚಲು ಅವನ ಆಧಾರ್ ಕಾರ್ಡ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಕೇಸು ಹಾಕಿರುವುದರಿಂದ ಪರಿಹಾರ ಪಡೆಯಲು ಬಾಧ್ಯರಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರರ ವಾಹನವು ಅಪಘಾತದಲ್ಲಿ ಭಾಗಿಯಾಗಿಲ್ಲದ ಕಾರಣ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**